# ಸಿನಿಮಾದಲ್ಲಿ ನಟಿಸುವಾಸೆ



'ಇಂಡೊನೇಷ್ಯಾದಲ್ಲಿ ನವೆಂಬರ್ 18 ರಂದು ಮುಸ್ಸಂಜೆಯ ವೇಳೆ ಝಗಮಗಿಸುವ ಬೆಳಕಿನಲ್ಲಿ ನಡೆದ ಅಂತಿಮ ಸ್ಪರ್ಧೆಯ ಫಲಿತಾಂಶ ಪ್ರಕಟವಾಗುವ ವೇಳೆಗೆ ಎಲ್ಲರೂ ಉಸಿರು ಬಿಗಿ ಹಿಡಿದುಕೊಂಡು ಕುಳಿತಿದ್ದರು. ಯೂಟ್ಯೂಬ್‌ನಲ್ಲಿ ನೇರ ಪ್ರಸಾರವಾಗುತ್ತಿದ್ದ ದೃಶ್ಯವನ್ನು ರಾಜ್ಯದ ಜನ ಅತ್ಯಂತ ಕುತೂಹಲದಿಂದ ವೀಕ್ಷಿಸುತ್ತಿದ್ದರು. ಸಂಘಟಕರು ಹೆಸರು ಪ್ರಕಟಿಸಿದ ಕ್ಷಣಾರ್ಧದಲ್ಲಿ ಶ್ವೇತ, ತಿಳಿನೀಲಿ ಹಾಗೂ ನೀಲಿ ಬಣ್ಣದ ಹರಳಿನಿಂದ ಕೂಡಿದ ಕಿರೀಟ ನನ್ನ ಮುಡಿಗೇರಿದಾಗ ಫ್ಯಾಷನ್ ಪ್ರಿಯರ ಸಂತಸಕ್ಕೆ ಪಾರವೇ ಇರಲಿಲ್ಲ.

ಹೀಗೆಂದು ಮಾತು ಆರಂಭಿಸಿದರು ಮಿಸ್ ಇಂಡಿಯಾ ಇಂಟರ್‌ನ್ಯಾಷನಲ್ 2019 ನಿಶಾ ತಾಳಂಪಳ್ಳಿ.

'ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳ ಬಳಕೆದಾರರರು ಹಾಗೂ ಫ್ಯಾಷನ್ ಅಭಿಮಾನಿಗಳು ನಿರೀಕ್ಷೆಗೂ ಮೀರಿ ನೀಡಿದ ಪ್ರೋತ್ಸಾಹವೇ ಮಿಸ್ ಇಂಡಿಯಾ ಇಂಟರ್‌ನ್ಯಾಷನಲ್ 2019ರ ಕಿರೀಟ ನನ್ನ ಮುಡಿಗೇರುವಂತೆ ಮಾಡಿತು' ಎಂದು ಹೇಳುವ ಮೂಲಕ ಆರಂಭದಲ್ಲೇ ಅಭಿಮಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು.

'ಇಂಡೊನೇಷ್ಯಾವರೆಗೆ ತೆರಳಲು ನನಗೆ ಸಕಲ ರೀತಿಯಲ್ಲೂ ನೆರವಾದ ವ್ಯಕ್ತಿಗಳನ್ನು ಬದುಕಿನುದ್ದಕ್ಕೂ ಮರೆಯಲಾಗದು. ನನ್ನ ಪಾಲಕರು, ಬೆಂಗಳೂರಿನ ರಾಮಕೃಷ್ಣ ರೆಡ್ಡಿ ಹಾಗೂ ಹುಮನಾಬಾದ್ ಶಾಸಕ ರಾಜಶೇಖರ ಪಾಟೀಲ ಅವರನ್ನು ಸ್ಮರಿಸದಿದ್ದರೆ ನನ್ನ ಸಾಧನೆಯ ಚರಿತ್ರೆ ಪೂರ್ಣಗೊಳ್ಳುವುದಿಲ್ಲ' ಎನ್ನುತ್ತಾರೆ ನಿಶಾ.

'ಮಲೇಷ್ಯಾದಲ್ಲಿ ನಡೆಯಲಿರುವ ಸೌಂದರ್ಯ ಸ್ಪರ್ಧೆಗೂ ನನಗೆ ಅವಕಾಶ ಬಂದೊದಗಿದೆ. ಇನ್ನು ಏನಿದ್ದರೂ ಹಾಲಿವುಡ್ ಹಾಗೂ ಬಾಲಿವುಡ್ ಪ್ರವೇಶಿಸುವುದೇ ನನ್ನ ಮುಂದಿನ ಗುರಿ' ಎಂದು ತಮ್ಮ ಮುಂದಿನ ನಡೆಯ ಬಗ್ಗೆ ಸ್ಪಷ್ಟ ಹಾಗೂ ಖಚಿತ ನಿರ್ಧಾರವನ್ನು ವ್ಯಕ್ತಪಡಿಸುತ್ತಾರೆ ಈ ಚೆಲುವೆ.

ಸ್ವಲ್ಪ ಹಿಂದೆ ಹೋಗಿ ಸ್ಪರ್ಧೆಯ ತಯಾರಿ ಕುರಿತು ವಿವರಿಸಿದ ಅವರು, 'ಇಂಡಿಯಾ ಫ್ಯಾಷನ್ ಫಿಫ್‌ಸ್ಟಾ (INDIA FASHION FIFSTA) ಐಎಫ್‌ಐಎಸ್‌ಟಿಎ ನಿರ್ದೇಶಕರಾದ ರಜತ್ ಸುನೇಜಾ ಹಾಗೂ ಗುಡ್ಡು ರೂಪಾನಿ ಅವರು ಇಂಡೊನೇಷ್ಯಾದಲ್ಲಿ ನವೆಂಬರ್ 14 ರಿಂದ 18ರ ವರೆಗೆ ನಡೆಯಲಿದ್ದ ಮಿಸ್ ಇಂಡಿಯಾ ಇಂಟರ್‌ನ್ಯಾಷನಲ್ 2019ರ ಅಂತಿಮ ಸ್ಪರ್ಧೆಗೆ ಆಯ್ಕೆಯಾಗಿರುವ ಪತ್ರವನ್ನು ಕಳಿಸಿದಾಗ ಬಹಳಷ್ಟು ಖುಷಿಯಾಗಿತ್ತು. ಸ್ಪರ್ಧೆಯಲ್ಲಿ ಗೆಲ್ಲುವ ಆತ್ಮವಿಶ್ವಾಸವೂ ಇತ್ತು. ಇದಕ್ಕೆ ಬೇಕಾದ ಎಲ್ಲ ಪೂರ್ವಸಿದ್ಧತೆಗಳನ್ನೂ ಅಚ್ಚುಕಟ್ಟಾಗಿ ನಡೆಸಿಕೊಂಡಿದ್ದೆ. ಇದೇ ನನ್ನ ಗೆಲುವಿಗೆ ಕಾರಣವೂ ಆಯಿತು' ಎಂದೂ ಹೇಳುತ್ತಾರೆ ಅವರು.

'ನಾನು ಕಲ್ಯಾಣ ಕರ್ನಾಟಕದವಳು. ಅಷ್ಟೇ ಅಲ್ಲ; ಸಂಪ್ರದಾಯಸ್ಥ ಕುಟುಂಬದಿಂದ ಬಂದವಳು. ಇಲ್ಲಿ ಹೆಣ್ಣು ಮಕ್ಕಳು ಮನೆಯಿಂದ ಹೊರಗೆ ಹೆಜ್ಜೆ ಹಾಕುವುದೇ ಅಪರೂಪ. ಆದರೆ ನನ್ನ ಕನಸನ್ನು ನನಸಾಗಿಸಲು ಎನ್‌ಇಕೆಆರ್‌ಟಿಸಿ ಹುಮನಾಬಾದ್ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ತಂದೆ ಶ್ರೀನಿವಾಸ ತಾಳಂಪಳ್ಳಿ ಹಾಗೂ ತಾಯಿ ಇಂದುಮತಿ ಅವಕಾಶ ಮಾಡಿಕೊಟ್ಟರು. ನನ್ನ ಪಾಲಕರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಅದು ಕಡಿಮೆ' ಎಂದು ನಿಶಾ ತಂದೆ ತಾಯಿಯರಿಗೆ ತುಂಬು ಹೃದಯದ ಕೃತಜ್ಞತೆ ಸಲ್ಲಿಸುತ್ತಾರೆ.




ಪಾಲ್ಗೊಂಡು ನಾಡಿಗೆ ಕೀರ್ತಿ ತರಬೇಕು ಎನ್ನುವ ಹೆಬ್ಬಯಕೆಯೊಂದಿಗೆ ಪ್ರಯತ್ನ ಮುಂದುವರಿಸಿದ್ದ ಅವರಿಗೆ ಕೊನೆಗೂ ಯಶಸ್ಸಿನ ಬಾಗಿಲು ತೆರೆದುಕೊಂಡಿತು.

ನಿಶಾ ಅವರು ಹುಮನಾಬಾದ್‌ನ ಭಗತ್‌ಸಿಂಗ್ ಇಂಗ್ಲಿಷ್ ಮೀಡಿಯಂ ಹೈಯರ್ ಪ್ರೈಮರಿ ಸ್ಕೂಲ್‌ನಲ್ಲಿ ಪ್ರಾಥಮಿಕ, ರವೀಂದ್ರನಾಥ ಟಾಗೋರ್ ಕಾನ್ವೆಂಟ್ ಹೈಸ್ಕೂಲ್‌ನಲ್ಲಿ ಪ್ರೌಢ ಶಿಕ್ಷಣ ಪಡೆದಿದ್ದಾರೆ. ಬೀದರ್‌ನ ಜ್ಞಾನಸುಧಾ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ಪಿಯುಸಿ ಹಾಗೂ ಹುಮನಾಬಾದ್‌ನ ಬಸವಸಾಗರ ಪದವಿ ಕಾಲೇಜಿನಲ್ಲಿ ಬಿ.ಎಸ್ಸಿ ಓದಿದ್ದಾರೆ. ನಂತರ ಹೈದರಾಬಾದ್‌ನಲ್ಲಿ ಒಂದು ವರ್ಷದ ಡಿಪ್ಲೊಮಾ ಇನ್ ಏವಿಯೇಷನ್ ತರಬೇತಿ ಪಡೆದು ಎಂಪಾವರ್ ಇಂಡಿಯಾ ಲಿಮಿಟೆಡ್‌ನಲ್ಲಿ ಆಪ್ತ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿ, ಅಲ್ಲಿಂದ ಹೊರ ಬಂದು ಪೂರ್ಣಾವಧಿಗೆ ಮಾಡೆಲಿಂಗ್‌ನಲ್ಲಿ ತೊಡಗಿಸಿಕೊಂಡಿದ್ದರು.

ನಿತ್ಯ ಯೋಗ ಹಾಗೂ ನೃತ್ಯ ಅಭ್ಯಾಸ ಮಾಡಿ ಬೌದ್ಧಿಕ ಕೌಶಲ ವೃದ್ಧಿಸಿಕೊಂಡಿದ್ದರು. ಮಾದಕ ನೋಟದೊಂದಿಗೆ ಫೋಟೊ ಕ್ಲಿಕ್ಕಿಸಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿದಾಗ ಅವರಿಗೆ ಲೈಕ್‌ಗಳ ಸುರಿಮಳೆ ಹರಿದಿತ್ತು. ಮಾಡೆಲಿಂಗ್ ಲೋಕದ ಅಭಿಮಾನಿಗಳು ತುಂಬು ಹೃದಯದಿಂದ ಸ್ವಾಗತಿಸಿದ್ದರು.

### ಮೊದಲ ಸುತ್ತಿನ ಮಿಸ್

ಇಂಡಿಯಾ ಇಂಟರ್‌ನ್ಯಾಷನಲ್ ಸ್ಪರ್ಧೆಯಲ್ಲಿ ದೇಶದ ಪ್ರಮುಖ ನಗರಗಳಿಂದ ಒಂಬತ್ತು ಸಾವಿರ ಚೆಲುವೆಯರು ಅರ್ಜಿ ಸಲ್ಲಿಸಿದ್ದರು. ಆನ್‌ಲೈನ್‌ನಲ್ಲಿ ಆಡಿಯೊ, ವಿಡಿಯೊ ಸಂದರ್ಶನ ಸಹ ಕೊಟ್ಟಿದ್ದರು. ಸೆಪ್ಟೆಂಬರ್‌ನಲ್ಲಿ ಹೈದರಾಬಾದ್‌ನಲ್ಲಿ ನಡೆದ ನೇರ ಸಂದರ್ಶನದಲ್ಲಿ 600 ಬೆಡಗಿಯರು ಪಾಲ್ಗೊಂಡಿದ್ದರು. ಆಯ್ಕೆ ವಿಧಾನದ ಕೊನೆಯ ಸುತ್ತಿನ ಸ್ಪರ್ಧೆಯಲ್ಲಿ 30 ಸ್ಪರ್ಧಿಗಳನ್ನು ಹಿಂದಿಕ್ಕಿ ನಿಶಾ ಆಯ್ಕೆಯಾಗಿದ್ದರು. ಇಂಡೊನೇಷ್ಯಾದಲ್ಲಿ ನಡೆದ ಸೌಂದರ್ಯ ಪ್ರದರ್ಶನ ಹಾಗೂ ಸಂದರ್ಶನದಲ್ಲೂ ಪ್ರತಿಭೆ ಮೆರೆದರು. ಕಿರೀಟ ಮುಡಿಗೇರಿದಾಗ ಅತಿಯಾದ ಖುಷಿಯಿಂದಾಗಿ ನಿಶಾ ಅವರಿಗೆ ಮಾತುಗಳೇ ಬರಲಿಲ್ಲ. ■